ಕರ್ನಾಟಕ ಸರ್ಕಾರ

ನಂ: ಎಎಲ್‌ಎನ್(ಪೂ) ಎಸ್ಆರ್ 2/2016-17

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 22-07-2016

**ಅಧಿಕೃತ ಜ್ಞಾಪನ :-**

ವಿಷಯ:- ಬೆಂಗಳೂರು ಜಿಲ್ಲೆ, ಬೆಂಗಳೂರು **ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಶೀಗೇಹಳ್ಳಿ** ಗ್ರಾಮದ ಸ.ನಂ. 17/3 ರಲ್ಲಿ 1-01 ಎಕರೆ/ಗುಂಟೆ **ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ** ಭೂ ಪರಿವರ್ತನೆ ಕೋರಿ **ಶ್ರೀ ಡಿ.ಎ. ಚಂದ್ರಶೇಖರಯ್ಯ ಬಿನ್ ಡಿ.ಟಿ. ಅಪ್ಪಣ್ಣ, ನಂ.24, ದೇವಸಂದ್ರ ಮೇನ್ ರೋಡ್, ಕೆ.ಆರ್.ಪುರಂ, ಬೆಂಗಳೂರು** ರವರು ಸಲ್ಲಿಸಿರುವ ಅರ್ಜಿಯ ದಿನಾಂಕ: 30-04-2016.

ಉಲ್ಲೇಖ:-

1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 7 ಎಲ್‌ಜಿಪಿ 95 ದಿನಾಂಕ: 07-06-1999

2) ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಆರ್.ಡಿ.56 ಎಲ್.ಜಿ.ಪಿ:2008 ದಿನಾಂಕ: 10-9-2008 ಮತ್ತು 24-9-2008.

3) ತಹಶೀಲ್ದಾರ್. ಬೆಂಗಳೂರು ಪೂರ್ವ ತಾಲ್ಲೂಕು ರವರ ವರದಿ ಸಂಖ್ಯೆ: ಎ.ಎಲ್.ಎನ್(ಕೆಆರ್‌ಪಿ) ಸಿಆರ್ 2/16-17 ದಿನಾಂಕ:25-05-2016.

4) ಭೂ ಪರಿವರ್ತನಾ ಶುಲ್ಕ ರೂ.55,812-00 ಮತ್ತು ಪೋಡಿ ಶುಲ್ಕ ರೂ.55-00 ಒಟ್ಟು ರೂ.55,867-00 ಗಳನ್ನು ಚಲನ್ ನಂ. 60 & 61 ದಿನಾಂಕ: 12-07-2016 ರಂದು ಎಸ್.ಬಿ.ಎಂ. ಕೆ.ಆರ್.ಪುರಂ, ಬೆಂಗಳೂರು ಇಲ್ಲಿ ಅರ್ಜಿದಾರರು ಜಮಾ ಮಾಡಿರುತ್ತಾರೆ.

5) ಸಹಾಯಕ ನಿರ್ದೇಶಕರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ:ಬೆಂಅಪ್ರಾ/ನಯೋಸ/ಸಿಓಎಸ್-265/301/2016-17 ದಿನಾಂಕ:10-06-2016 ಮತ್ತು ಉಪ ಆಯುಕ್ತರು, (ಭೂಸ್ವಾ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ರವರ ಪತ್ರ ಸಂಖ್ಯೆ: ಬೆಂಅಪ್ರಾ/ಉಪ (ಭೂಸ್ವಾ) 815/2016-17 ದಿನಾಂಕ:08-06-2016, ವಿಶೇಷ ಭೂಸ್ವಾಧೀನಾಧಿಕಾರಿಗಳು, ಪೋಡಿಯಂ ಬ್ಲಾಕ್, ಬೆಂಗಳೂರು ರವರ ಪತ್ರ ಸಂ.ಎಸ್‌ಎಲ್‌ಎಓ/ಜಿಎಲ್/706/16-17 ದಿನಾಂಕ: 18-06-2016, ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ ಬೆಂಗಳೂರು ರವರ ಪತ್ರ ಸಂ.ಬೆಂಗಳೂರು/ವಿಭೂಸ್ವಾಅ/967/2016-17 ದಿ:18-06-2016

***

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95(2),95(4) ಮತ್ತು 95(7) ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ವಾಸದ ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ.54,450-00 ( ಐವತ್ನಾಲ್ಕು ಸಾವಿರದ ನಾಲ್ಕು ನೂರಾ ಐವತ್ತು) ಗಳಂತೆ ಅರ್ಜಿದಾರರು ಉಲ್ಲೇಖ (4) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ **ಶ್ರೀ ಡಿ.ಎ. ಚಂದ್ರಶೇಖರಯ್ಯ ಬಿನ್ ಡಿ.ಟಿ. ಅಪ್ಪಣ್ಣ, ನಂ.24, ದೇವಸಂದ್ರ ಮೇನ್ ರೋಡ್, ಕೆ.ಆರ್.ಪುರಂ, ಬೆಂಗಳೂರು** ಇವರು ಬೆಂಗಳೂರು ಜಿಲ್ಲೆ, **ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಶೀಗೇಹಳ್ಳಿ** ಗ್ರಾಮದ ಸ.ನಂ. 17/3 ರಲ್ಲಿ 1-01 **ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ** ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1 ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ) ,ಬಿ.ಎಂ.ಐ.ಸಿ.ಎ.ಪಿ.ಎ /ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2 ಈ ಪರಿವರ್ತಿತ ಜಮೀನನ್ನು ವ್ಯವಸಾಯೇತರ **ವಾಸದ** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು, ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.



Scanned by CamScanner

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿಐಎಪಿಎ/ಬಿಎಂಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ), ಬಿ.ಎಂ.ಐ.ಸಿ. ಎ.ಪಿ.ಎ /ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4 ಭೂಪರಿವರ್ತನೆ ಕೋರಿರುವ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳಿಗೆ ನಿಗಧಿಪಡಿಸಲಾದ ಅಂದರೆ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ದೇವಸ್ಥಾನ, ಸಿ.ಎ ನಿವೇಶನ ಖಾಲಿ ಜಾಗ, ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಎಂ.ಆರ್.ಡಿ.ಎ.(ಸ್ಥಳೀಯ ಯೋಜನಾ ಪ್ರಾಧಿಕಾರ)/ ಬಿ.ಎಂ.ಐ.ಸಿ.ಎ.ಪಿ.ಎ/ ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಸಕ್ಷಮ ಪ್ರಾಧಿಕಾರಗಳಿಗೆ ಪರಿತ್ಯಾಗ ಪತ್ರ (Relinquish Deed) ಮಾಡಿಕೊಡತಕ್ಕದ್ದು. ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರ ವಿಧಿಸಿರುವ ಷರತ್ತುಗಳಿಗೊಳಪಟ್ಟಿರುತ್ತದೆ.

5 ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೆ ನಿವೇಶನಗಳನ್ನು/ ಕಟ್ಟಡಗಳನ್ನು ಸಂಬಂಧಪಟ್ಟ ನೋಂದಾವಣಾಧಿಕಾರಿಗಳಿಂದ/ಉಪನೋಂದಣಾಧಿಕಾರಿಗಳಿಂದ ನೊಂದಾವಣೆ ಮಾಡತಕ್ಕದ್ದಲ್ಲ, ಖಾತೆದಾರರು ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿಗೆ ಪೂರಾ ವಿಸ್ತೀರ್ಣವನ್ನು ಮಾರಾಟ ಮಾಡಲು ಉದ್ದೇಶಿಸಿದ್ದಲ್ಲಿ ಈ ಆದೇಶ ಅಡ್ಡಿ ಬರುವುದಿಲ್ಲ.

6 ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7 ಈ ಜಮೀನಿಗೆ ತಾಕು ಖೂಟು ಖರಾಬು ಜಮೀನು ಇದ್ದಲ್ಲಿ, ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ತಹಶೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

8 ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ:7556–665 ಆರ್ ಮತ್ತು ಬಿ–6–54–5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ.ಪಿ 1/7(11) 67, ದಿನಾಂಕ: 1.1.1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9 ಭೂ ಪರಿವರ್ತನೆ ಮಂಜೂರಿ ಯಾವ ಉದ್ದೇಶಕ್ಕೆ ಆಗಿರುತ್ತದೆಯೋ ಅದೇ ಉದ್ದೇಶಕ್ಕೆ ಈ ದಿನದಿಂದ ಎರಡು ವರ್ಷಗಳ ಒಳಗಾಗಿ ಉಪಯೋಗಿಸತಕ್ಕದ್ದು.

10 ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ,ಅನಿಲ, ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ ಇಲಾಖೆಯ ಅನುಮತಿ ಹೊಂದಿರತಕ್ಕದ್ದು.

11 ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ ರಿಟ್ ಅರ್ಜಿ ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

12 ಪ್ರಸ್ತಾವಿತ ಜಮೀನಿನ ಬಗ್ಗೆ ಯಾವುದೇ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

13 ಪರಿಷ್ಕೃತ ಮಾಸ್ಟರ್ ಪ್ಲಾನ್ –2015 ರಲ್ಲಿ ಸೂಕ್ಷ್ಮ ವಲಯ (Sensitive Zone) ನಲ್ಲಿ ಬರುವ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರಿಗೆ ಭೂ ಪರಿವರ್ತನೆ ಬಗ್ಗೆ ಮಾಹಿತಿ ನೀಡುವಾಗ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯನ್ನು ಕೈಗೊಳ್ಳಬಾರದು.

14 ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಪ್ರಾಧಿಕಾರದಿಂದ ರಚಿತವಾದ ಉಪ ಸಮಿತಿಯ ನಿರ್ಣಯದಂತೆ ನಕ್ಷೆಗಳನ್ನು ಅನುಮೋದಿಸಿಕೊಳ್ಳತಕ್ಕದ್ದು.

15 ಪ್ರಶ್ನಿತ ಜಮೀನು ಸರ್ಕಾರಿ ಜಮೀನು ವ್ಯಾಪ್ತಿಗೆ ಒಳಪಟ್ಟಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(3) ರ ಅಡಿ ವಿಚಾರಣೆ ನಡೆಸಿ, ಹೊರಡಿಸಿರುವ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

..3..



Scanned by CamScanner

16 ಪ್ರಶ್ನಿತ ಜಮೀನು ಸರ್ಕಾರದಿಂದ ಮಂಜೂರಾದ ಯಾವುದೇ ಸರ್ಕಾರಿ ಜಮೀನಾಗಿದ್ದಲ್ಲಿ ಪಕ್ಕಾ ಪೋಡಿಯಾಗದ ಮತ್ತು ಪಕ್ಕಾ ಪೋಡಿ ಮಾಡಿಸಿಕೊಳ್ಳದೇ ತಪ್ಪು ಮಾಹಿತಿ ನೀಡಿ ಭೂ ಪರಿವರ್ತನೆ ಆದೇಶ ಪಡೆದಿದ್ದು ಕಂಡುಬಂದಲ್ಲಿ ಸದರಿ ಆದೇಶವನ್ನು ರದ್ದುಗೊಳಿಸಲಾಗುವುದು.

17 ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆ ಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ಅಧಿಕೃತಜ್ಞಾಪನ ಪಡೆದಿರುವುದು ಸ್ಪಷ್ಟಪಟ್ಟಲ್ಲಿ ತಕ್ಷಣ ರದ್ದುಗೊಳ್ಳುತ್ತದೆ. ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ಲುಕ್ಸಾನಿಗೆ ಸರ್ಕಾರವಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

18 ಉಲ್ಲೇಖ(5)ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ದಿನಾಂಕ:25-07-2015ರ ಪತ್ರದಲ್ಲಿ ತಿಳಿಸಿರುವ ಷರತ್ತಿಗೆ ಒಳಪಡಿಸಿದೆ.

ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮತೆಗೆದುಕೊಳ್ಳಲಾಗುವುದು. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

: : <u>ಷೆಡ್ಯೂಲ್ ವಿವರ</u> : :

ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಶೀಗೇಹಳ್ಳಿ ಗ್ರಾಮದ ಸ.ನಂ. 17/3 ರಲ್ಲಿ 1-01 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ:

ಚಕ್ಕುಬಂದಿ

| ಸ.ನಂ. | ವಿಸ್ತೀರ್ಣ | ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|---|---|
| 17/3 | 1-01 | ಸ.ನಂ.20ರ ಜಮೀನು | ಸ.ನಂ.16ರ ಜಮೀನು | ಸ.ನಂ.14 ಹಾಲಿ ಅಡವಿಯಂತೆ ರಸ್ತೆ | ಸ.ನಂ.17/2ರ ಜಮೀನು |

ಸಹಿ/-
( ವಿ. ಶಂಕರ್ )
ಜಿಲ್ಲಾಧಿಕಾರಿಗಳು
ಬೆಂಗಳೂರು ಜಿಲ್ಲೆ, ಬೆಂಗಳೂರು.

<u>ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:-</u>

1) ತಹಸೀಲ್ದಾರ್, ಪೂರ್ವ ತಾಲ್ಲೂಕು ರವರಿಗೆ ಮೇಲ್ಕಂಡ ಅಧಿಕೃತಜ್ಞಾಪನ ಮತ್ತು ಚಲನ್ ಹಾಗೂ ಕರಾರು ಪತ್ರದೊಂದಿಗೆ ಕಳುಹಿಸುತ್ತಾ, ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಗಣಕೀಕೃತ ಆರ್.ಟಿ.ಸಿ.ಯಲ್ಲಿ ಕೂಡಲೇ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ, ಬೆಂಗಳೂರು
4) ಉಪ ನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪ ವಿಭಾಗ, ಬೆಂಗಳೂರು ಇವರಿಗೆ ಆರ್.ಟಿ.ಸಿ. ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ, ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ.
5) ಉಪ ನೊಂದಣಾಧಿಕಾರಿಗಳು, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6) ಅರ್ಜಿದಾರರಾದ ಶ್ರೀ ಡಿ.ವಿ. ಚಂದ್ರಶೇಖರಯ್ಯ ಬಿನ್ ಡಿ.ಟಿ. ಅಪ್ಪಣ್ಣ, ನಂ.24, ದೇವಸಂದ್ರ ಮೇನ್ ರೋಡ್, ಕೆ.ಆರ್.ಪುರಂ, ಬೆಂಗಳೂರು ರವರಿಗೆ ಮಾಹಿತಿಗಾಗಿ.
7) ಹೆಚ್ಚಿನ ಪ್ರತಿ

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು

99

Scanned by CamScanner